ಶ್ರೀ ಆರ್.ಶ್ರೀನಿವಾಸ (ತೋಟಗಾರಿಕೆ ಸಚಿವರು):

ಅ) ಹನಿ ನೀರಾವರಿಯನ್ನು ಕಡ್ಡಾಯಗೊಳಿಸುವುದು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ. ಆದರೆ ತೋಟಗಾರಿಕೆ ಬೆಳೆಗಳನ್ನು ರಕ್ಷಿಸಲು ಹನಿನೀರಾವರಿಯನ್ನು ಜನಪ್ರಿಯಗೊಳಿಸಲು ಅಗತ್ಯ ಕ್ರಮಕ್ಕೆಗೊಳ್ಳಲಾಗುತ್ತಿದೆ.

ಆ) ಬಡ ರೈತರಿಗೆ ಅನುಕೂಲ ಕಲ್ಪಿಸಲು ರಾಜ್ಯಾದ್ಯಂತ ಗಂಗಾಕಲ್ಯಾಣ ಯೋಜನೆಯ ಫಲಾನುಭವಿಗಳಿಗೆ ಶೇ.100 ಸಬ್ಸಿಡಿಯನ್ನು ಒದಗಿಸಲಾಗುತ್ತಿದೆ. ಕೋಲಾರ ಮತ್ತು ಬಿಜಾಪುರ ಜಿಲ್ಲೆಗಳನ್ನು ಹೊರತುಪಡಿಸಿ ಇತರೆ ಜಿಲ್ಲೆಯ ಎಲ್ಲಾ ರೈತರಿಗೆ ಶೇಕಡ 50 ಸಬ್ಸಿಡಿಯನ್ನು ಒದಗಿಸಲಾಗುತ್ತಿದೆ. ಬಿಜಾಪುರ ಮತ್ತು ಕೋಲಾರ ಜಿಲ್ಲೆಯಲ್ಲಿ 2003–04 ಮತ್ತು 2004–05 ಸಾಲಿಗೆ ಮಾತ್ರ ವಿಶೇಷ ಪ್ರಕರಣವೆಂದು ಪರಿಗಣಿಸಿ ಶೇಕಡ 100 ರ ಸಬ್ಸಿಡಿಯನ್ನು ಒದಗಿಸಲಾಗುತ್ತಿದೆ.

1460(323) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 31.03.2004ಕ್ಕೆ ಅನ್ವಯವಾಗುವಂತೆ ರಾಜ್ಯದ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಂದ ಬರತಕ್ಕ ಅಸಲು ಹಾಗೂ ಬಡ್ಡಿ ಮೊತ್ತ ಎಷ್ಟು? (ವಿವರ ನೀಡುವುದು)

ಆ) ರಾಜ್ಯದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ ಆಯಾ ಜಿಲ್ಲಾ ಪ್ರಾಥಮಿಕ ಸಹಕಾರಿ ವ್ಯವಸಾಯ ಪತ್ತಿನ ಸಂಘಗಳ ಬ್ಯಾಂಕುಗಳಿಂದ ಬರಬೇಕಾದ ಅಸಲು ಮತ್ತು ಬಡ್ಡಿ ಮೊತ್ತ ದಿನಾಂಕ: 31.03.2004ಕ್ಕೆ ಅನ್ವಯಿಸುವಂತೆ ಎಷ್ಟು? (ವಿವರ ನೀಡುವುದು)

ಶ್ರೀ ಆರ್.ವಿ.ದೇಶಪಾಂಡೆ (ಸಹಕಾರ ಸಚಿವರು):

ಅ) ದಿ:31.03.2004ಕ್ಕೆ ರಾಜ್ಯದ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಂದ ರೂ.1179.01 ಕೋಟಿ ಅಸಲು ಮತ್ತು ರೂ. 14.17 ಕೋಟಿ ಬಡ್ಡಿ ಬರಬೇಕಾಗಿರುತ್ತದೆ.

ಆ) ದಿ:31.03.2004ಕ್ಕೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ ಆಯ ಜಿಲ್ಲಾ ಪ್ರಾಥಮಿಕ ಸಹಕಾರಿ ವ್ಯವಸಾಯ ಪತ್ತಿನ ಸಂಘಗಳ/ಬ್ಯಾಂಕುಗಳಿಂದ ರೂ.2181.11 ಕೋಟಿ ಅಸಲು ಹಾಗೂ ರೂ.430.00 ಕೋಟಿ ಬಡ್ಡಿ ಬರಬೇಕಾಗಿರುತ್ತದೆ.

ವಿವರ ಕೆಳಕಂಡಂತಿರುತ್ತದೆ.

(ರೂ.ಕೋಟಿಗಳಲ್ಲಿ)

ಸಾಲದ ವಿವರ	ಅಸಲು	ಬಡ್ಡಿ
ಅಲ್ಪಾವಧಿ ಕೃಷಿ ಸಾಲ	1905.76	323.57
ಮಧ್ಯಮಾವಧಿ ಸಾಲ	275.35	106.43
ಒಟ್ಟು ರೂ.	2181.11	430.00

1461(325) ಶ್ರೀ ಓಲೆಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು ದಿ: 31.03.2004ಕ್ಕೆ ಹೊಂದಿರುವ ಒಟ್ಟು ನಷ್ಟದ ಮೊಬಲಗು ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

2) ಈ ಬ್ಯಾಂಕಿಗೆ, ತಾಲ್ಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ದಿ: 31.03.2004ಕ್ಕೆ ಕೊಡಬೇಕಾಗಿರುವ ಸಾಲ ಮತ್ತು ಬಡ್ಡಿಯ ವಿವರಗಳೇನು?

3) ಎಲ್ಲಾ ಭೂ ಅಭಿವೃದ್ಧಿ ಅಥವಾ ಕೃಷಿ ಅಭಿವೃದ್ಧಿ ಬ್ಯಾಂಕುಗಳನ್ನು ರಾಜ್ಯ ಅಪೆಕ್ಸ್ ಬ್ಯಾಂಕ್ ಹಾಗೂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ ವಿಲೀನಗೊಳಿಸಿ ದೀರ್ಘಾವಧಿ ಸಾಲ ಕೊಡುವುದನ್ನು ಸಹ ಅವುಗಳಿಗೆ ವಹಿಸಿಕೊಡಲು ಕ್ರಮ ಜರುಗಿಸುವರೇ?

ಶ್ರೀ ಆರ್.ವಿ.ದೇಶಪಾಂಡೆ (ಸಹಕಾರ ಸಚಿವರು):

1) ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ದಿ: 31.03.2004ಕ್ಕೆ ರೂ.201.72 ಕೋಟಿ ಸಂಚಿತ ನಷ್ಟ ಹೊಂದಿದೆ.

ರಾಜ್ಯ ಬ್ಯಾಂಕು ಶೃಂಗ ಬ್ಯಾಂಕಾಗಿದ್ದು, ಕೇಂದ್ರ ಕಛೇರಿ ಹಂತದಲ್ಲಿ ಜಿಲ್ಲಾ ಶಾಖೆಗಳನ್ನೊಳಗೊಂಡಂತೆ ಒಟ್ಟಾರೆ ಲಾಭ ಹಾನಿಯ ಲೆಕ್ಕಾಚಾರ ಮಾಡಲಾಗುತ್ತಿದ್ದು, ಜಿಲ್ಲಾವಾರು ಲಾಭ–ಹಾನಿ ತಃಖ್ತೆಗಳನ್ನು ಮಾಡುತ್ತಿರುವುದಿಲ್ಲ.

ರಾಜ್ಯದಲ್ಲಿನ 177 ಪ್ರಾಥಮಿಕ ಬ್ಯಾಂಕುಗಳ ಪೈಕಿ 167 ಪ್ರಾಥಮಿಕ ಬ್ಯಾಂಕುಗಳು ಒಟ್ಟು ರೂ.591.88 ಕೋಟಿಯ ಸಂಚಿತ ನಷ್ಟ ಹೊಂದಿವೆ. ಉಳಿದ 10 ಪ್ರಾಥಮಿಕ ಬ್ಯಾಂಕುಗಳು ಲಾಭದಲ್ಲಿವೆ.

2) ರಾಜ್ಯ ಬ್ಯಾಂಕಿಗೆ, ತಾಲ್ಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ದಿನಾಂಕ: 31.03.2004ಕ್ಕೆ ಕೊಡಬೇಕಾಗಿರುವ ಸಾಲ ರೂ.1333.17 ಕೋಟಿ ಇದ್ದು ಮತ್ತು ಬಡ್ಡಿ ರೂ.114.22 ಕೋಟಿಗಳಷ್ಟು ಅಲ್ಲದೇ ಮುಂದುವರೆದ ಬಡ್ಡಿ ರೂ.31.70ಕೋಟಿ ಬರಬೇಕಾಗಿದೆ.

3) ಇಂತಹ ಪ್ರಸ್ತಾವ ಯಾವುದೂ ಸರ್ಕಾರದ ಮುಂದೆ ಇರುವುದಿಲ್ಲ.

1462(327) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪಡಿತರ ವ್ಯವಸ್ಥೆ ಅಡಿಯಲ್ಲಿ ಹಳದಿ ಕಾರ್ಡ್‌ಗಳ ವಿತರಣೆ ಕುರಿತಾಗಿ ಗೊಂದಲ ಉಂಟಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಗೊಂದಲ ನಿವಾರಣೆಯ ಕುರಿತು ಸರಕಾರ ಕೈಗೊಂಡ ಕ್ರಮಗಳೇನು;

ಇ) ಹಳದಿ ಕಾರ್ಡ್‌ಗಳ ಕೊರತೆಯಿದ್ದರೂ ಬಡವರಿಗೆ ವಿತರಿಸಿದ ಕಾರ್ಡ್‌ಗಳನ್ನು ಹಿಂದಕ್ಕೆ ಪಡೆಯುತ್ತಿರುವುದು ನ್ಯಾಯ ಸಮಂಜಸವೇ;

ಈ) ಈ ರೀತಿ ಕಾರ್ಡುಗಳನ್ನು ಹಿಂದಕ್ಕೆ ಪಡೆಯಲಾದ ಸಂಖ್ಯೆಯೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಉ) ಅರ್ಹ ಕುಟುಂಬಗಳಿಗೆ ಕೂಡಲೇ ಹಳದಿ ಕಾರ್ಡುಗಳನ್ನು ವಿತರಿಸಲು ಸರಕಾರ ಕೈಗೊಂಡ ಕ್ರಮಗಳೇನು;

ಊ) ಈ ಹಳದಿ ಕಾರ್ಡ್‌ಗಳಲ್ಲಿನ ಪದ್ಧತಿಗಳನ್ನು ಬದಲಾಯಿಸಿ ಹಿಂದೆ ಜಾರಿಯಲ್ಲಿದ್ದ ಯುನಿಟ್ ಪದ್ಧತಿಯನ್ನು ಜಾರಿಗೆ ತರುವ ವಿಚಾರ ಸರಕಾರದ ಮುಂದಿದೆಯೇ?